## ಕರ್ನಾಟಕ ಕಾರಾಗೃಹಗಳ ಇಲಾಖೆ

### ಪರಿಕಲ್ಪನೆಃ

ಕಾರಾಗೃಹಗಳು ದಂಡ ನ್ಯಾಯ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿವೆ. ಸಜಾ ಬಂದಿಗಳು ಮತ್ತು ವಿಚಾರಣಾಧೀನ ಬಂದಿಗಳ ಸುರಕ್ಷಿತ ಅಭಿರಕ್ಷೆಗಾಗಿ ಕಾರಾಗೃಹಗಳನ್ನು ಸ್ಥಾಪಿಸಲಾಗಿದೆ. ಕಾರಾವಾಸ ದಂಡಾದೇಶ ವಿಧಿಸುವ ಉದ್ದೇಶ ಮತ್ತು ಔಚಿತ್ಯವೇನೆಂದರೆ, ಸಮಾಜವನ್ನು ಅಪರಾಧದ ವಿರುದ್ಧ ಮತ್ತು ಪ್ರತಿಕಾರದ ವಿರುದ್ಧ ರಕ್ಷಿಸುವುದು ಮತ್ತು ಬಂದಿಗಳನ್ನು ಸತತ ತರಬೇತಿ, ವಿದ್ಯಾಭ್ಯಾಸ ಮತ್ತು ಪರಸ್ಪರ ತಿಳುವಳಿಕೆಗಳಿಂದ ಸುಧಾರಿತ ನಾಗರಿಕನ್ನಾಗಿ ಮಾಡಿ ಸಮಾಜದಲ್ಲಿ ಪುನರ್ ಸೇರ್ಪಡೆ ಮಾಡಲು ಬದ್ದವಾಗಿರುವುದಾಗಿದೆ.

### ಧ್ಯೇಯೊದ್ದೇಶಃ

ಇಲಾಖೆಯ ಧ್ಯೇಯೋದ್ದೇಶ ಬಂದಿಗಳ ಸುಧಾರಣೆ, ಮನಃಪರಿವರ್ತನೆ ಹಾಗೂ ಪುರ್ನವಸತಿಯ (ಪೂರಕ ವಾತಾವರಣ) ಕಲ್ಪಿಸುವುದು. ಈ ನಿಟ್ಟಿನಲ್ಲಿ ಈ ಕೆಳಕಂಡ ಸುಧಾರಣಾ ಕ್ರಮಗಳು ದಿನನಿತ್ಯದ ಆಡಳಿತ ಪದ್ದತಿಯಲ್ಲಿ ಜಾರಿಯಲ್ಲಿವೆ.

1. ಬಂದಿಗಳ ಇಚ್ಛೆಗೆ ಅನುಗುಣವಾಗಿ ವಿವಿಧ ವೃತ್ತಿ ಪರ ಶಿಕ್ಷಣಗಳಲ್ಲಿ ತರಬೇತಿ
   - i. ವಿದ್ಯುತ್ ಚಾಲಿತ ಮತ್ತು ಕೈಮಗ್ಗದ ನೇಯ್ಗೆ
   - ii. ದರ್ಜಿ ಕೆಲಸ
   - iii. ಮರಗೆಲಸ
   - iv. ಜಮಖಾನೆ ತಯಾರಿಕೆ
   - v. ಮುದ್ರಣ
   - vi. ಚಮ್ಮಾರಿಕೆ
   - vii. ಡೇರೆಗಳನ್ನು ತಯಾರಿಸುವುದು
   - viii. ಸಾಬೂನು ಮತ್ತು ಫಿನಾಯಿಲ್ ತಯಾರಿಸುವು ದು
   - ix. ಕಮ್ಮಾರಿಕೆ ಮತ್ತು ಸ್ಟೀಲ್ ಫರ್ನೀಚರ್ ತಯಾರಿಕೆ
   - x. ಆಧುನಿಕ ರೀತಿಯಲ್ಲಿ ಕೃಷಿ ಮತ್ತು ತೋಟಗಾರಿಕೆ,
   - i. ಹೈನುಗಾರಿಕ

ವಿನೂತನ ಪ್ರಯೋಗಗಳುಃ-

ಬಂದಿಗಳಿಗೆ ಬಿಡುಗಡೆಯ ನಂತರ ಪುರ್ನವಸತಿಗೆ ಅನುಕೂಲವಾಗುವಂತೆ ಈ ಮುಂದೆ ತಿಳಿಸಿರುವ ಪ್ರಚಲಿತ ವೃತ್ತಿಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

I. ಬೇಕರಿ ತಿನುಸುಗಳ ತಯಾರಿಕೆ
II. ಗಾಲಿ ಕುರ್ಚಿಗಳ ದುರುಸ್ಥಿ ಮತ್ತು ಮರುಜೋಡಣೆ
III. ಕುರಿ,ಹಂದಿ, ಸಾಕಾಣಿಕೆ
IV. ಸಾವಯವ ಕೃಷಿ
V. ಮೇಣದ ಬತ್ತಿ ತಯಾರಿಕೆ
VI. ಗಣಕಯಂತ್ರ ನಿರ್ವಹಣೆ ತರಬೇತಿ

2. ಮಜೂರಿ ಗಳಿಕೆ ಯೋಜನೆ

3. ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು
4. ವಾಚನಾಲಯ ಮತ್ತು ಹೆಚ್ಚಿನ ವ್ಯಾಸಂಗ ಮಾಡಲು ಅನುಕೂಲತೆ( ದೂರ ಶಿಕ್ಷಣ- 'KSOU/IGNOU/ NIOS)
5. ಸಂಬಂದಿಗಳೊಂದಿಗೆ, ಸ್ನೇಹಿತರೊಂದಿಗೆ ಹಾಗೂ ವಕೀಲರೊಂದಿಗೆ ಸಂದರ್ಶನ ಹಾಗೂ ಪತ್ರ ವ್ಯವಹಾರಮಾಡಲು ಅವಕಾಶ
6. ಸಂಬಂಧಿಕರನ್ನು ಭೇಟಿ ಮಾಡಲು, ಕೌಟುಂಬಿಕ ಸಮಸ್ಯೆಗಳನ್ನು ಪರಿಹರಿಸಲು ಅವಕಾಶ ಸಂಸಾರದ ಕಷ್ಟ ಸುಖಗಳಲ್ಲಿ ಭಾಗವಹಿಸಲು ಮತ್ತು ಕೃಷಿ ಚಟುವಟಿಕೆಗಳಲ್ಲಿ ಭಾಗವಹಿಸಲು ಪೆರೋಲ್ ಮತ್ತು ತಾತ್ಕಲಿಕ/ ತುರ್ತು ಪೆರೋಲ್ ಸೌಲಭ್ಯ
7.ಅವಧಿ ಪೂರ್ವ ಬಿಡುಗಡೆ
8. ಮನೋಭಿವೃದ್ದಿಗಾಗಿ ಯೋಗ , ಧ್ಯಾನ ,ಮನಃಪರಿವರ್ತನ ಹಾಗೂ ಆಧ್ಯಾ ತ್ಮಿಕ ಶಿಬಿರಗಳು
9. ಅಂತರ ಕಾರಾಗೃಹ ಬಂದಿಗಳ ಕ್ರೀಡಾಕೂಟ

**ಮೂಲಭೂತ ಕರ್ತವ್ಯಗಳು ಹಾಗೂ ಹೊಣೆಗಾರಿಕೆಗಳು ಃ**

ಘನ ನ್ಯಾಯಾಲಯದ ಆದೇಶದ ಅನ್ವಯ ನ್ಯಾಯಾಂಗ ಬಂದನಕ್ಕೆ ಗುರಿಯಾದ ಬಂದಿಗಳಿಗೆ ಪ್ರವೇಶ ನೀಡಿ ಅವರನ್ನು ಬಂದನದಲ್ಲಿಡುವುದು . ಪ್ರವೇಶ ಹೊಂದಿದ ನಂತರ ಅವರಿಗೆ ಮೂಲಭೂತ ವ್ಯವಸ್ಥೆಗಳಾದ ಆಹಾರ, ಬಟ್ಟೆ ಹಾಗೂ ವೈದ್ಯಕೀಯ ಸವಲತ್ತುಗಳನ್ನು ನಿಯಮಗಳ ಅನ್ವಯ ಒದಗಿಸುವುದು ಹಾಗೂ ಬಂದಿಗಳನ್ನು ತಿದ್ದುಪಡಿ ಮಾಡಿ ಪರಿವರ್ತಿತ ನಾಗರೀಕನ್ನಾಗಿ ಮಾಡುವ ಕಾರ್ಯವನ್ನು ಸಾಧಿಸುವ ಗುರಿ ಕಾರಾಗೃಹದ ಅಧಿಕಾರಿ ಃಸಿಬ್ಬಂದಿಗಳಾಗಿರುತ್ತದೆ.

## ಸಂಘಟನೆಃ

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಉಪ ಮಹಾನಿರೀಕ್ಷಕರು ಕಾರಾಗೃಹಗಳ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ.ಕೇಂದ್ರ ಕಾರ್ಯಸ್ಥಾನದಲ್ಲಿ ಇಬ್ಬರು ಉಪ ಮಹಾನಿರೀಕ್ಷಕರು , ಬೆಂಗಳೂರು ಹಾಗೂ ಬೆಳಗಾವಿಯ ಕೇಂದ್ರ ಕಾರಾಗೃಹದಲ್ಲಿ ಇಬ್ಬರು ಉಪ ಮಹಾನಿರೀಕ್ಷಕರು ಇರುತ್ತಾರೆ. ಇಲಾಖಾ ಮುಖ್ಯಸ್ಥರ ಅಧೀನದಲ್ಲಿ 4 ಉಪಮಹಾನಿರೀಕ್ಷಕರು ಕರ್ತವ್ಯನಿರ್ವಹಿಸುತ್ತಾರೆ. ಕೇಂದ್ರ ಕಾರ್ಯಸ್ಥಾನದಲ್ಲಿ ಪತ್ರಾಂಕಿತ ವ್ಯವಸ್ಥಾಪಕರುಗಳು ಹಾಗೂ ವ್ಯವಸ್ಥಾಪಕರು ಸಹಾಯಕರಾಗಿರುತ್ತಾರೆ. ಎಲ್ಲಾ ಕೇಂದ್ರ ಕಾರಾಗೃಹಗಳು, ಜಿಲ್ಲಾ ಕಾರಾಗೃಹಗಳು , ಜಿಲ್ಲಾ ಕೇಂದ್ರ ಉಪ ಕಾರಾಗೃಹಗಳು, ವಿಶೇಷ ಉಪ ಕಾರಾಗೃಹಗಳು ಹಾಗೂ 30 ತಾಲ್ಲೂಕು ಉಪ ಕಾರಾಗೃಹಗಳು ಇಲಾಖಾ ಅಧಿಕಾರಿ ಃಸಿಬ್ಬಂದಿಗಳ ಮೇಲ್ವಿಚಾರಣೆಯಲ್ಲಿರುತ್ತದೆ. 40 ತಾಲ್ಲೂಕು ಉಪ ಕಾರಾಗೃಹಗಳು ಕಂದಾಯ ಇಲಾಖೆಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿರುತ್ತವೆ.

ಇಲಾಖೆಯ ಸಂಘಟನಾ ಪಟ್ಟಿ (Organisational Chart) ಯನ್ನು ಅನುಬಂಧ ಆ ರಲ್ಲಿ ಒದಗಿಸಲಾಗಿದೆ.

## ನಾಗರೀಕರ ಹಕ್ಕುಗಳುಃ

ಇಲಾಖೆಯಲ್ಲಿ ಸಾಮಾನ್ಯವಾಗಿ ಸಾರ್ವಜನಿಕರ / ನಾಗರೀಕರ ಸಂಪರ್ಕ ಅತ್ಯಂತ ವಿರಳವಾಗಿದ್ದು ನಾಗರೀಕ ಹಕ್ಕುಗಳ ಕುರಿತಾಗಿ ಕಾರಾಗೃಹಗಳ ಅಧಿಕಾರಿ ಹಾಗೂ ಸಿಬ್ಬಂದಿಗಳ ಕರ್ತವ್ಯ ಮತ್ತು ಹೊಣೆಗಾರಿಕೆಗಳನ್ನು ಈ ಕೆಳಕಂಡಂತೆ ನಿಗದಿಪಡಿಸಿಕೊಳ್ಳಲಾಗಿದೆ.

1. ಯಾವ ವ್ಯಕ್ತಿಯ ಕುಟುಂಬದ ಸದಸ್ಯರು ಹಾಗೂ ಹತ್ತಿರ ಸಂಬಂಧಿಗಳು ಕಾರಾಗೃಹ ವಾಸದ ಶಿಕ್ಷೆಗೆ ಗುರಿಯಾಗಿದ್ದಲ್ಲಿ ಸಂಬಂಧಿಸಿದ ವ್ಯಕ್ತಿಯು ಕಾರಾಗೃಹದ ಅಧಿಕಾರಿಯಲ್ಲಿ ಸೂಕ್ತ ಪುರಾವೆಗಳೊಂದಿಗೆ ಆ ಬಂದಿಯ ಬಂಧನದ ಅವಧಿ/ ಕಾರಾಗೃಹವಾಸದ ಕುರಿತಾದ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.
2. ವ್ಯಕ್ತಿಯು ನ್ಯಾಯಾಂಗ ಬಂದನಕ್ಕೆ ಗುರಿಯಾಗಿ ಕಾರಾಗೃಹಕ್ಕೆ ಪ್ರವೇಶ ಹೊಂದಿದ ನಂತರ ಅಧಿಪತ್ರದಲ್ಲಿ ಉಲ್ಲೇಖಿಸಿರುವ ಘನ ನ್ಯಾಯಾಲಯದ ಆದೇಶ ಹಾಗೂ ನಿರ್ದೇಶನದಂತೆ ಬಂಧನದಲ್ಲಿಡಲಾಗುವ ಬಗ್ಗೆ ಮಾಹಿತಿ ನೀಡಲಾಗುವುದು.
3. ವಿಚಾರಣಾ ಬಂದಿಗಳು ಕಾರಾಗೃಹದಲ್ಲಿ ತಮ್ಮದೆ ಆದ ಬಟ್ಟೆ ಬರೆಗಳನ್ನು ಧರಿಸಲು ಅನುಮತಿವುಳ್ಳವರಾಗಿರುತ್ತಾರೆ. ಒಂದು ವೇಳೆ ಅವರು ಅಶಕ್ತರಾದಲ್ಲಿ ಸರ್ಕಾರದ ವೆಚ್ಚದಲ್ಲಿ ಬಟ್ಟೆ ಮತ್ತು ಹಾಸಿಗೆ ಹೊದಿಕೆಯನ್ನು ಒದಗಿಸಲಾಗುವುದು.
4. ವಿಚಾರಣಾ ಬಂದಿಗಳಿಗೆ/ ಸಜಾ ಬಂದಿಗಳಿಗೆ ಅರ್ಹವಿರುವ ಃ' ಸಮಯೋಜಿತ ಹಾಗೂ ಅಧಿಕಾರಿಯ ಉಸ್ತುವಾರಿಯಲ್ಲಿ ಹತ್ತಿರದ ಸಂಬಂದಿಗಳೊಡನೆ , ಸ್ನೇಹಿತರು ಅಥವಾ ಕಾನೂನು ಸಲಹೆಗಾರರೊಡನೆ ಮಾತನಾಡಲು ಅಥವಾ ಪತ್ರ ಮುಖೇನ ಸಂಪರ್ಕಿಸಲು ಅವಕಾಶ ನೀಡಲಾಗುವುದು. ಸಂದರ್ಶನ ಬಯಸುವ ಬಂದಿಯ ಸಂಬಂದಿಗಳು , ಸ್ನೇಹಿತರು, ಕಾನೂನು ಸಲಹೆಗಾರರು ಸಂಬಂಧಿಸಿದ ಕಾರಾಗೃಹದ ಅಧೀಕ್ಷಕರನ್ನು ಅಥವಾ ನೇಮಿಸಲ್ಪಟ್ಟ ಸೂಕ್ತ ಕಾರಾಗೃಹದ ಅಧಿಕಾರಿಯನ್ನು ಮೌಖಿಕವಾಗಿ ಅಥವಾ ಬರವಣಿಗೆಯ ರೂಪದಲ್ಲಿ(ಮನವಿ ಪತ್ರ) ಕೋರಿ ಅವರ ಅನುಮತಿಯನ್ನು ಪಡೆದುಕೊಳ್ಳತಕ್ಕದ್ದು.

5. ವ್ಯಕ್ತಿ, ಸಂಸ್ಥೆಗಳು ,ಸರ್ಕಾರೇತರ ಸಂಘ ಸಂಸ್ಥೆಗಳು ಹಾಗೂ ಖಾಸಗಿ ಉದ್ದಿಮೆದಾರರು ಬಂದಿಗಳ ಪುರ್ನವಸತಿಗಾಗಿ ವೃತ್ತಿ ಪರ ಕೋರ್ಸಗಳಲ್ಲಿ ತರಬೇತಿ ನೀಡಲು ಆಸಕ್ತರಾಗಿದ್ದಲ್ಲಿ ಅಂತಹವರು ಸಂಬಂಧಿಸಿದ ಕಾರಾಗೃಹದ ಅಧೀಕ್ಷಕರನ್ನು ಸಂಪರ್ಕಿಸಿ ಅವರ ಮಾರ್ಗದರ್ಶನದಲ್ಲಿ ಅರ್ಹ ಬಂದಿಗಳಿಗೆ ವಿವಿಧ ವೃತ್ತಿ ಪರ ಕೋರ್ಸುಗಳಲ್ಲಿ ತರಬೇತಿ ನೀಡಿ ಬಿಡುಗಡೆ ನಂತರ ಸೂಕ್ತ ಉದ್ಯೋಗವನ್ನು ಒದಗಿಸಿಕೊಡಬಹುದಾಗಿದೆ.
6. ಕಾರಾಗೃಹವಾಸದಲ್ಲಿರುವ ಬಂದಿಗಳ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಲು ಮುಂದೆ ಬರುವ ನೊಂದಾಯಿತ ಸಂಸ್ಥೆಗಳು ಸಂಬಂಧಿಸಿದ ಕಾರಾಗೃಹದ ಅಧೀಕ್ಷಕರನ್ನು ಸಂಪರ್ಕಿಸಿ ಆ ನಿಟ್ಟನಲ್ಲಿ ಸೌಲಭ್ಯ ಕಲ್ಪಿಸಿಕೊಡಲು ಅವಕಾಶವಿರುತ್ತದೆ.
7. ಮಹಿಳಾ ಬಂದಿಗಳಿಂದ ಬೇರ್ಪಟ್ಟ ಅಥವಾ ಪತ್ಯೇಕ ಹೊಂದಿದ ಬಂದಿಗಳ ಮಕ್ಕಳನ್ನು ಪೋಷಣೆ ಮಾಡಿ, ವಿದ್ಯಾಭ್ಯಾಸ ನೀಡಲು ಆಸಕ್ತಿ ಹೊಂದಿ ಮುಂದೆ ಬರುವ ಅರ್ಹ ಸಂಸ್ಥೆಗಳು ಸಂಬಂಧಿಸಿದ ಕಾರಾಗೃಹದ ಅಧೀಕ್ಷಕರನ್ನು ಸಂಪರ್ಕಿಸಿ ಆ ನಿಟ್ಟನಲ್ಲಿ ಸೌಲಭ್ಯ ಕಲ್ಪಿಸಿಕೊಡಲು ಅವಕಾಶವಿರುತ್ತದೆ.
8. ಬಂದಿಗಳ ಮನೋಭಿವೃದ್ಧಿ ಹಾಗೂ ಮನೋಸ್ಥೈರ್ಯವನ್ನು ಹೆಚ್ಚಿಸುವ ಮತ್ತು ಮನಃಪರಿವರ್ತನೆ ಮಾಡಲು ಆಸಕ್ತ ಧಾರ್ಮಿಕ ಸಂಸ್ಥೆಗಳು ಕಾರಾಗೃಹದ ಅಧೀಕ್ಷಕರ ಪೂರ್ವಾನುಮತಿ ಪಡೆದು ಕಾರಾಗೃಹಗಳಲ್ಲಿ ಪ್ರಾರ್ಥನೆ, ಭಜನೆ ಹಾಗೂ ನೈತಿಕ ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅವಕಾಶವಿರುತ್ತದೆ.

**ಕುಂದು ಕೊರತೆ ನಿವಾರಣೆ ವ್ಯವಸ್ಥೆಃ**

ಸಾರ್ವಜನಿಕರು ಕುಂದು ಕೊರತೆ ಏನೇ ಇದ್ದಲ್ಲಿ ಅದನ್ನು ಸಂಬಂಧಿಸಿದ ಕಾರಾಗೃಹದ ಅಧೀಕ್ಷಕರಿಗೆ ಮೌಖಿಕವಾಗಿ ಅಥವಾ ಪತ್ರ ಮುಖೇನ ದೂರನ್ನು ನೀಡಬಹುದಾಗಿದೆ.

ಕಚೇರಿಯ ವೇಳೆಃ ಬೆಳಗ್ಗೆಃ 10 ರಿಂದ ಸಂಜೆ 5.30

ಸೋಮವಾರ ದಿಂದ ಶನಿವಾರದವರೆಗೆ

(ಎರಡನೇ ಶನಿವಾರ ಹೊರತುಪಡಿಸಿ)

ಪ್ರತಿ ಕಾರಾಗೃಹಗಳಲ್ಲಿ **ಕುಂದು ಕೊರತೆ ನಿವಾರಣೆಗಾಗಿ** ದೂರು ನಿವಾರಣಾ ಅಧಿಕಾರಿಗಳ ಮಾಹಿತಿ ಹೆಸರು, ಹುದ್ದೆ. ಕಚೇರಿ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆ ಇತ್ಯಾದಿ ಮಾಹಿತಿಗಳನ್ನು ಆಯಾ ಕಾರಾಗೃಹದ ಮುಖ್ಯದ್ವಾರದ ಬದಿಯಲ್ಲಿ ನಮೂದಿಸಲಾಗಿರುತ್ತದೆ.

ಇಲಾಖೆಯ ಸಂಘಟಿತ ರಚನೆ




## ದೂರು ನಿವಾರಣಾ ಅಧಿಕಾರಿಗಳ ಮಾಹಿತಿ

| ಕ್ರ ಸಂ. | ಶಾಖೆ ಅಥವಾ ಕಛೇರಿ | ದೂರು ನಿವಾರಣಾ ಅಧಿಕಾರಿ |
|---|---|---|
| 1 | ಕೇಂದ್ರ ಕಛೇರಿ | ಕಾರಾಗೃಹಗಳ ಉಪ ಮಹಾನಿರೀಕ್ಷಕರು |
| 2 | ಕೇಂದ್ರ ಕಾರಾಗೃಹ, ಬೆಂಗಳೂರು | ಕಾರಾಗೃಹಗಳ ಉಪ ಮಹಾನಿರೀಕ್ಷಕರು |
| 3 | ಕೇಂದ್ರ ಕಾರಾಗೃಹ, ಬೆಳಗಾವಿ | ಕಾರಾಗೃಹಗಳ ಉಪ ಮಹಾನಿರೀಕ್ಷಕರು ಹಾಗೂ ಮುಖ್ಯ ಅಧೀಕ್ಷಕರು |
| 4 | ಕೇಂದ್ರ ಕಾರಾಗೃಹ, ಬಳ್ಳಾರಿ | ಅಧೀಕ್ಷಕರು |
| 5 | ಕೇಂದ್ರ ಕಾರಾಗೃಹ, ಬಿಜಾಪುರ | ಅಧೀಕ್ಷಕರು |

| | | |
|---|---|---|
| 6 | ಕೇಂದ್ರ ಕಾರಾಗೃಹ, ಗುಲ್ಬರ್ಗಾ | ಮುಖ್ಯ ಅಧೀಕ್ಷಕರು |
| 7 | ಕೇಂದ್ರ ಕಾರಾಗೃಹ, ಮೈಸೂರು | ಮುಖ್ಯ ಅಧೀಕ್ಷಕರು |
| 8 | ಮಹಿಳಾ ಕೇಂದ್ರ ಕಾರಾಗೃಹ, ತುಮಕೂರು | ಅಧೀಕ್ಷಕರು |
| 9 | ಕೇಂದ್ರ ಕಾರಾಗೃಹ ಧಾರವಾಡ | ಅಧೀಕ್ಷಕರು |
| 10 | ಕಾರಾಗೃಹ ಸಿಬ್ಬಂದಿ ತರಬೇತಿ ಸಂಸ್ಥೆ,ಮೈಸೂರು | ಪ್ರಾಂಶುಪಾಲರು |
| 11 | ಬಯಲು ಬಂಧೀಖಾನೆ, ಕೋರಮಂಗಲ | ಅಧೀಕ್ಷಕರು |
| 12 | ಜಿಲ್ಲಾ ಕಾರಾಗೃಹ, ಬೀದರ್ | — ಃ — |
| 13 | ಜಿಲ್ಲಾ ಕಾರಾಗೃಹ, ಕಾರವಾರ | — ಃ — |
| 14 | ಜಿಲ್ಲಾ ಕಾರಾಗೃಹ, ಮಂಗಳೂರು | — ಃ — |
| 15 | ಜಿಲ್ಲಾ ಕಾರಾಗೃಹ, ಮಡಿಕೇರಿ | — ಃ — |
| 16 | ಜಿಲ್ಲಾ ಕಾರಾಗೃಹ, ರಾಯಚೂರು | ಅಧೀಕ್ಷಕರು |
| 17 | ಜಿಲ್ಲಾ ಕಾರಾಗೃಹ, ಶಿವಮೊಗ್ಗ | — ಃ — |
| 18 | ಜಿಲ್ಲಾ ಕಾರಾಗೃಹ, ಚಿತ್ರದುರ್ಗ | — ಃ — |
| 19 | ಜಿಲ್ಲಾ ಕಾರಾಗೃಹ,ಚಾಮರಾಜನಗರ | — ಃ — |
| 20 | ಜಿಲ್ಲಾ ಕಾರಾಗೃಹ, ಹಾವೇರಿ | — ಃ — |
| 21 | ಜಿಲ್ಲಾ ಕಾರಾಗೃಹ, ರಾಮನಗರ | — ಃ — |
| 22 | ಜಿಲ್ಲಾ ಕಾರಾಗೃಹ, ಚಿಕ್ಕಬಳ್ಳಾಪುರ | — ಃ — |
| 23 | ಜಿಲ್ಲಾ ಕಾರಾಗೃಹ ಉಡುಪಿ | — ಃ — |
| 24 | ಜಿಲ್ಲಾ ಕಾರಾಗೃಹ, ಕೊಪ್ಪಳ | — ಃ — |
| 25 | ಜಿಲ್ಲಾ ಕಾರಾಗೃಹ, ಬಾಗಲಕೋಟೆ | — ಃ — |
| 26 | ಜಿಲ್ಲಾ ಕಾರಾಗೃಹ, ತುಮಕೂರು | — ಃ — |
| 27 | ಜಿಲ್ಲಾ ಉಪ ಕಾರಾಗೃಹ, ಹಾಸನ | — ಃ — |

| | | |
|---|---|---|
| 28 | ಜಿಲ್ಲಾ ಉಪ ಕಾರಾಗೃಹ, ಕೋಲಾರ | ___ ಃ ___ |
| 29 | ಜಿಲ್ಲಾ ಉಪ ಕಾರಾಗೃಹ, ಮಂಡ್ಯ | ___ ಃ ___ |
| 30 | ಜಿಲ್ಲಾ ಉಪ ಕಾರಾಗೃಹ, ಚಿಕ್ಕಮಗಳೂರು | ___ ಃ ___ |
| 31 | ವಿಶೇಷ ಉಪ ಕಾರಾಗೃಹ, ದಾವಣಗೆರೆ | ___ ಃ ___ |
| 32 | ವಿಶೇಷ ಉಪ ಕಾರಾಗೃಹ, ಕೆ.ಜಿ.ಎಫ್. | ಅಧೀಕ್ಷಕರು |
| 33 | ತಾಲ್ಲೂಕು ಉಪ ಕಾರಾಗೃಹ, ಬೈಲಹೊಂಗಲ | ___ ಃ ___ |
| 34 | ತಾಲ್ಲೂಕು ಉಪ ಕಾರಾಗೃಹ, ಗೋಕಾಕ್ | ___ ಃ ___ |
| 35 | ತಾಲ್ಲೂಕು ಉಪ ಕಾರಾಗೃಹ, ಹೊಸಪೇಟೆ | ___ ಃ ___ |
| 36 | ತಾಲ್ಲೂಕು ಉಪ ಕಾರಾಗೃಹ, ಬಾದಾಮಿ | ___ ಃ ___ |
| 37 | ತಾಲ್ಲೂಕು ಉಪ ಕಾರಾಗೃಹ, ಜಮಖಂಡಿ | ___ ಃ ___ |
| 38 | ತಾಲ್ಲೂಕು ಉಪ ಕಾರಾಗೃಹ, ಆಳಂದ | ___ ಃ ___ |
| 39 | ತಾಲ್ಲೂಕು ಉಪ ಕಾರಾಗೃಹ, ಸುರಪುರ | ___ ಃ ___ |
| 40 | ತಾಲ್ಲೂಕು ಉಪ ಕಾರಾಗೃಹ, ಯಾದಗೀರ್ | ___ ಃ ___ |
| 41 | ತಾಲ್ಲೂಕು ಉಪ ಕಾರಾಗೃಹ, ಕೊಳ್ಳೇಗಾಲ | ___ ಃ ___ |
| 42 | ತಾಲ್ಲೂಕು ಉಪ ಕಾರಾಗೃಹ, ನಂಜನಗೂಡು | ___ ಃ ___ |
| 43 | ತಾಲ್ಲೂಕು ಉಪ ಕಾರಾಗೃಹ, ಕೆ.ಆರ್. ನಗರ | ___ ಃ ___ |
| 44 | ತಾಲ್ಲೂಕು ಉಪ ಕಾರಾಗೃಹ, ಗದಗ | ___ ಃ ___ |
| 45 | ತಾಲ್ಲೂಕು ಉಪ ಕಾರಾಗೃಹ, ಚಿಂತಾಮಣಿ | ___ ಃ ___ |
| 46 | ತಾಲ್ಲೂಕು ಉಪ ಕಾರಾಗೃಹ, ಎನ್ ಆರ್ ಪುರ | ___ ಃ ___ |
| 47 | ತಾಲ್ಲೂಕು ಉಪ ಕಾರಾಗೃಹ, ಸಕಲೇಶಪುರ | ___ ಃ ___ |
| 48 | ತಾಲ್ಲೂಕು ಉಪ ಕಾರಾಗೃಹ, ಹುಬ್ಬಳ್ಳಿ | ಅಧೀಕ್ಷಕರು |
| 49 | ತಾಲ್ಲೂಕು ಉಪ ಕಾರಾಗೃಹ, ಹುಮನಾಬಾದ್ | ___ ಃ ___ |
| 50 | ತಾಲ್ಲೂಕು ಉಪ ಕಾರಾಗೃಹ, ಔರಾದ್ | ___ ಃ ___ |

| | | |
|---|---|---|
| 51 | ತಾಲ್ಲೂಕು ಉಪ ಕಾರಾಗೃಹ, ಯಲ್ಲಾಪುರ | ___ ಃ ___ |
| 52 | ತಾಲ್ಲೂಕು ಉಪ ಕಾರಾಗೃಹ, ವಿರಾಜಪೇಟೆ | ___ ಃ ___ |
| 53 | ತಾಲ್ಲೂಕು ಉಪ ಕಾರಾಗೃಹ, ದೇವದುರ್ಗ | ___ ಃ ___ |
| 54 | ತಾಲ್ಲೂಕು ಉಪ ಕಾರಾಗೃಹ, ಗಂಗಾವತಿ | ___ ಃ ___ |
| 55 | ತಾಲ್ಲೂಕು ಉಪ ಕಾರಾಗೃಹ, ಲಿಂಗಸುಗೂರು | ___ ಃ ___ |
| 56 | ತಾಲ್ಲೂಕು ಉಪ ಕಾರಾಗೃಹ, ಮಾನ್ವಿ | ___ ಃ ___ |
| 57 | ತಾಲ್ಲೂಕು ಉಪ ಕಾರಾಗೃಹ, ಸಾಗರ | ___ ಃ ___ |
| 58 | ತಾಲ್ಲೂಕು ಉಪ ಕಾರಾಗೃಹ, ತರೀಕೆರೆ | ___ ಃ ___ |
| 59 | ತಾಲ್ಲೂಕು ಉಪ ಕಾರಾಗೃಹ, ಅರಸೀಕೆರೆ | ___ ಃ ___ |
| 60 | ತಾಲ್ಲೂಕು ಉಪ ಕಾರಾಗೃಹ, ತಿಪಟೂರು | ___ ಃ ___ |
| 61 | ತಾಲ್ಲೂಕು ಉಪ ಕಾರಾಗೃಹ, ಕಡೂರು | ___ ಃ ___ |
| 62 | ತಾಲ್ಲೂಕು ಉಪ ಕಾರಾಗೃಹ, ಹಡಗಲಿ | ___ ಃ ___ |

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು
ಕರ್ನಾಟಕ ಕಾರಾಗೃಹ ಮಹಾನಿರೀಕ್ಷಕರು

ಕರ್ನಾಟಕ ಸರ್ಕಾರ

ಕಾರಾಗೃಹಗಳ ಇಲಾಖೆ

# ನಾಗರಿಕ ಸನ್ನದು